Crl Mis– 86/2022

ಪಿ. ಡಬ್ಲೂ – 1

ಸಾಕ್ಷಿಯನ್ನು ದಿಃ 21.01.2025 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಎದುರುದಾರರ ಪರ ಶ್ರೀ.ಕೆ.ಎನ್.ಎಸ್ ವಕೀಲರಿಂದ –**

ದಿನಾಂಕ 29.01.2024 ರಂದು ಎದುರುದಾರನ ವಿರುದ್ಧ ನಾನು ದೂರನ್ನು ನೀಡಿದ್ದೇನೆ. ಅದರ ಗುನ್ನಾ ಸಂಖ್ಯೆ 19/2024, ಸಾಗರ ಗ್ರಾಮಾಂತರ ಪೋಲಿಸ್ ಠಾಣೆ. ಸದರಿ ದೂರಿಗೆ ಸಂಬಂಧಿಸಿದ ಪ್ರ.ವ ವರದಿ ಮತ್ತು ಅಂತಿಮ ವರದಿಯನ್ನು ಸಾಕ್ಷಿಯು ನೋಡಿದ ಗುರುತಿಸಿದ್ದರಿಂದ, ಅವುಗಳನ್ನು ಒಟ್ಟಾಗಿ ನಿಡಿ–8 ಎಂದು ಗುರುತಿಸಲಾಯಿತು. ಪೋಲಿಸರ ಮುಂದೆ ನಾನು ನಿಡಿ–8 ರ ಪ್ರಕರಣದಲ್ಲಿ ಹೇಳಿಕೆಯನ್ನು ನೀಡಿದ್ದೇನೆ. ನಿಡಿ–8 ರ ವರದಿಯನ್ನು ಸಲ್ಲಿಸಿದ ಬಗ್ಗೆ ನನಗೆ ಕಳೆದ ವಾರ ತಿಳಿಯಿತು.

ನಿಡಿ–8 ರ ಪೂರ್ವದಲ್ಲಿ ಭಾ.ದಂ.ಸ ಕಲಂ 498 ಎ ನ ಅಪರಾಧಕ್ಕಾಗಿ ಎದುರುದಾರನ ವಿರುದ್ಧ ಗುನ್ನಾ ಸಂಖ್ಯೆ 278/2023 ನಂತರ ಸಾಗರ ಪೇಟೆ ಪೋಲಿಸ್ ಠಾಣೆಯಲ್ಲಿ ಪ್ರಕರಣವನ್ನು ದಾಖಲಿಸಿದ್ದೇನೆ. ಪ್ರಸ್ತುತ ಜೀವನಾಂಶದ ಅರ್ಜಿಯನ್ನು ಸಲ್ಲಿಸಿದ ನಂತರ ಈ ಎಲ್ಲಾ ಪ್ರಕರಣಗಳನ್ನು

ಎದುರುದಾರನ ವಿರುದ್ಧ ದಾಖಲಿಸಿದ್ದೇನೆ ಎಂದರೆ ಸರಿ. ಈ ಜೀವನಾಂಶ ಅರ್ಜಿಗೆ ಸಹಾಯವಾಗಲೀ ಎಂದು ಎದುರುದಾರನ ವಿರುದ್ಧ ಸುಳ್ಳು ದೂರುಗಳನ್ನು ದಾಖಲಿಸುತ್ತಾ ಬಂದಿದ್ದೇನೆ ಎನ್ನುವುದು ಸರಿಯಲ್ಲ. ಎದುರುದಾರನ ಕುಟುಂಬದ ಎಲ್ಲಾ ಸದಸ್ಯರ ವಿರುದ್ಧ ಸಾಗರ ಪೇಟೆ ಪೋಲಿಸ್ ಠಾಣೆಯಲ್ಲಿ ದೂರನ್ನು ದಾಖಲಿಸಿದ್ದೇನೆ. ಸದರಿ ಪ್ರಕರಣದಲ್ಲಿ ಸಾಕ್ಷಿಯು ನೀಡಿದ ದೂರು, ಪ್ರ.ವ. ವರದಿ, ದಾಖಲೆಗಳು ಮತ್ತು ದೋಷಾರೋಪಣಾ ಪಟ್ಟಿಯನ್ನು ನೋಡಿ ಗುರುತಿಸಿದ ಕಾರಣ ಅವುಗಳನ್ನು ಒಟ್ಟಾಗಿ ನಿಡಿ-9 ಎಂದು ಗುರುತಿಸಲಾಯಿತು.

ನಿಡಿ-9 ರ ಪ್ರಕರಣದ ವಿರುದ್ಧ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ತಡೆಯಾಜ್ಞೆ ನೀಡಿದೆ ಎಂದರೆ, ಸಾಕ್ಷಿಯು ಎದುರುದಾರನನ್ನು ಹೊರತು ಪಡಿಸಿ ಉಳಿದ ಆರೋಪಿತಗಳ ವಿರುದ್ಧ ತಡೆಯಾಜ್ಞೆ ನೀಡಿದ್ದಾರೆ ಎನ್ನುತ್ತಾರೆ. ನಿಡಿ-8 ರ ವರದಿಯಲ್ಲಿ ಬರೆದ ಮಾಹಿತಿ ನನಗೆ ಗೊತ್ತು. ನಾನು ಎದುರುದಾರನ ವಿರುದ್ಧ ವಿನಃ ಕಾರಣ ಸುಳ್ಳು ಪ್ರಕರಣಗಳನ್ನು ಮತ್ತು ದೂರುಗಳನ್ನು ದಾಖಲಿಸಿ ಮಾನಸಿಕ ಕಿರುಕುಳ ನೀಡುತ್ತಿದ್ದೇನೆ ಎನ್ನುವುದು ಸರಿಯಲ್ಲ.

ನಿಡಿ-8 ರ ಕಾಲಕ್ಕೆ ನಮ್ಮ ಮನೆಯಲ್ಲಿ ನಾಗಭೂಷಣರವರು ಇದ್ದರು. ನಮ್ಮ ಮನೆಯಿಂದ ನಾಗಭೂಷಣರವರ ಮನೆಗೆ 11 ಕಿ.ಮೀ ದೂರ ಇದೆ. ನಿಡಿ-8 ರಂತೆ ದೂರನ್ನು ದಾಖಲಿಸಿರುವ ಘಟನೆಯು ಆ ದಿನ ರಾತ್ರಿ ಸುಮಾರು 10.45 ರಿಂದ 11.00 ಗಂಟೆಯಾಗಿರಬಹುದು. ನಾಗಭೂಷಣರವರು ಪ್ರತೀ ನ್ಯಾಯಾಲಯದ ಮುದ್ದತ್ತಿನ ದಿನಾಂಕದಂದು ನನ್ನ ಜೊತೆ ಬರುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಮುಂದುವರೆದು ನನಗೂ ಅವರಿಗೂ ಯಾವುದೇ ಸಂಬಂಧ ಇಲ್ಲ. ಅವರ ಹೆಂಡತಿ ಒಂದು ಪ್ರಕರಣವನ್ನು ದಾಖಲಿಸಿದ್ದು, ಅದರಲ್ಲಿ ನಾನು ಸಾಕ್ಷಿಯಾಗಿದ್ದೇನೆ ಎನ್ನುತ್ತಾರೆ. ನಾಗಭೂಷಣರವರ ಹೆಂಡತಿ ಅವರ ಕುಟುಂಬದ ಮೇಲೆ ಪ್ರಕರಣ ದಾಖಲಿಸಿದ್ದಾರೆ. ನನಗೆ ನಾಗಭೂಷಣರವರ ಕುಟುಂಬದ ಸಹಕಾರ ಇದೆ ಎಂದರೆ ಸರಿಯಲ್ಲ. ನಾಗಭೂಷಣರವರ ಕುಮ್ಮಕ್ಕಿನಿಂದ ನಾನು ನಿಡಿ-8 ಮತ್ತು 3 ರಂತೆ ನಾನು ಎದುರುದಾರನ ಮತ್ತು ಅವನ ಕುಟುಂಬದ ವಿರುದ್ಧ ದೂರನ್ನು ನೀಡುತ್ತಾ ಬಂದಿದ್ದೇನೆ ಎನ್ನುವುದು ಸರಿಯಲ್ಲ.

ಎದುರುದಾರನ ಮನೆಯ ಹತ್ತಿರ ಮೃತ್ಯುಜಯೇಶ್ವರ ದೇವಸ್ಥಾನ ಇದೆ. 2024 ರಲ್ಲಿ ಮೃತ್ಯುಜಯೇಶ್ವರ ದೇವಸ್ಥಾನಕ್ಕೆ ಹೋಗಿದ್ದೆ. ಯಾವ ದಿನ ಹೋಗಿದ್ದೆ ಎಂದು ನನಗೆ ನೆನಪಿಲ್ಲ. ಆ ದಿನ ನಾನು 2 ನೇ ಅರ್ಜಿದಾರಳನ್ನು ಅಲ್ಲಿಗೆ ಕರೆದುಕೊಂಡು ಹೋಗಿಲ್ಲ. ಆ ದಿನ ನಾನು ದೇವಸ್ಥಾನಕ್ಕೆ

ಹೋಗಿ ಬರಲು ಎರಡು ದಿನ ಬೇಕಾಯಿತು. ಆ ದಿನ ನಾನು ಕಾರಿನಲ್ಲಿ ಕುಕ್ಕೆ, ಧರ್ಮಸ್ಥಳ ಹಾಗೂ ಮೃತ್ಯುಜಯೇಶ್ವರ ದೇವಸ್ಥಾನಕೆಕ್ಕ ನಾಗಭೂಷಣರವರೊಂದಿಗೆ ಹೋಗಿದ್ದೆ ಎನ್ನುವುದು ಸರಿಯಲ್ಲ.

ನನ್ನ ಮಗು ದೊಡ್ಡದಾದ ನಂತರ ಮುಂದೆ ಕೆಲಸ ಮಾಡಬೇಕು ಎಂದು ಅಂದುಕೊಂಡಿದ್ದೇನೆ. ನಾನು ಆಗಾಗ ಹೊಸನಗರ, ಧರ್ಮಸ್ಥಳ, ಕುಕ್ಕೆ, ತೀರ್ಥಹಳ್ಳಿ ಹಾಗೂ ಇತರೆ ಕಡೆಗಳಲ್ಲಿ ಪ್ರಯಾಣ ಮಾಡುತ್ತೇನೆ ಎಂದರೆ ಉಚಿತ ಬಸ್ಸು ಇರುವ ಕಾರಣ ಹೋಗುತ್ತೇನೆ ಎನ್ನುತ್ತಾರೆ. ನಾನು ಎಲ್ಲಾ ಕಡೆ ಸುತ್ತಾಡುವುದು ನನ್ನ ಸ್ವಭಾವ ಎಂದರೆ ಸುಳ್ಳು. ಮುಂದುವರೆದು ಮದುವೆಯಾದ ನಂತರ ನಮ್ಮ ಗುರುಗಳು ಇರುವ ಕಡೆ ಹೋಗುತ್ತೇನೆ ಎನ್ನುತ್ತಾರೆ. ನಾನು ನನ್ನ ಗಂಡನ ಮನೆಯಲ್ಲಿದ್ದಾಗ ಏಕಾಏಕಿ ರಸ್ತೆಯಲ್ಲಿ ಓಡಾಡುವುದು, ಮರದ ಅಡಿಯಲ್ಲಿ ಕುಳಿತುಕೊಳ್ಳುವುದು ಮಾಡುತ್ತಿದ್ದೆ ಎಂದರೆ ಸಾಕ್ಷಿಯು ಈಗ ನಾನು ಮಾಡುತ್ತಿಲ್ಲ ಎನ್ನುತ್ತಾರೆ. ಸಾಕ್ಷಿಯು ಕಟಕಟೆಯಲ್ಲಿ ನಿಂತು ವಿನಃ ಕಾರಣ ಮಾತನಾಡುವುದಲ್ಲದೇ ನಗಾಡುವುದನ್ನು ನ್ಯಾಯಾಲಯವು ಗಮನಿಸಿದೆ.

2010 ನೇ ಸಾಲಿನಲ್ಲಿ ನಾನು ಶಿವಮೊಗ್ಗದ ಡಾಃಶ್ರೀಧರರವರ ಬಳಿ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೇನೆ. ಸದರಿ ಚಿಕಿತ್ಸೆಯನ್ನು ನಾನು ಅಲ್ಲಿಗೆ ಬಿಟ್ಟಿರುತ್ತೇನೆ. ಮಂಗಳೂರಿನ ಮನಶಾಂತಿ ಆಸ್ಪತ್ರೆಗೆ ನನ್ನನ್ನು ಗಂಡ, ಅತ್ತೆ ಮಾವ ನನಗೆ ತಿಳಿಯದಂತೆ ಕರೆದುಕೊಂಡು ಹೋಗಿರುತ್ತಾರೆ. ಹೆಣ್ಣು ಮಕ್ಕಳ ಸಮಸ್ಯೆಗೆ ನಾಟೀ ಔಷಧವನ್ನು ನನ್ನ ಅತ್ತೆ ಮಾವ ಕೊಡಿಸಿದ್ದಾರೆ. ಸದರಿ ನಾಟಿ ಔಷಧ ತಜ್ಞರೆಂದರೆ ಪಾಣಾಜೆ ವೆಂಕಟರಾಮ ದಯಿತೋಟೆ. ಪುತ್ತೂರಿನ ಧನವಂತರಿ ಆಸ್ಪತ್ರೆಗೆ ನಾನು ಚಿಕಿತ್ಸೆಗೆ ಹೋಗಿದ್ದೆ. ಅಲ್ಲಿಗೆ ನನ್ನನ್ನು ನನ್ನ ಗಂಡ ಮತ್ತು ಅತ್ತೆ–ಮಾವ ಕರೆದುಕೊಂಡು ಹೋಗಿದ್ದರು. ನನಗೆ ಮಕ್ಕಳಾಗಲಿಲ್ಲ ಎನ್ನುವ ಕಾರಣದಿಂದ ನನ್ನ ಅತ್ತೆ ಚಿಕಿತ್ಸೆಗೆ ಕರೆದುಕೊಂಡು ಹೋಗಿದ್ದರು. ನನ್ನ ಮೇಲಿನ ಕಾಳಾಜಿಯಿಂದ ಮೇಲಿನಂತೆ ನನಗೆ ಚಿಕಿತ್ಸೆಗೆ ಕರೆದುಕೊಂಡು ಹೋಗಿದ್ದಾರೆ ಎಂದರೆ ಹಾಗೂ ಅಂದುಕೊಳ್ಳಬಹುದು ಎನ್ನುತ್ತಾರೆ.

ನನ್ನ ಅತ್ತೆ ಮಾವ ಚಿಕಿತ್ಸೆ ಕೊಡಿಸಿದ್ದರಿಂದ ಈಗ ನನಗೆ ದೈಹಿಕ ಸಮಸ್ಯೆ ನಿವಾರಣೆಯಾಗಿದೆ ಎಂದರೆ ಸಾಕ್ಷಿಯು ನನಗೆ ಈಗಲೂ ದೈಹಿಕ ಸಮಸ್ಯೆ ನಿವಾರಣೆಯಾಗಿಲ್ಲ ಎನ್ನುತ್ತಾರೆ. ನನ್ನ ಅತ್ತೆ ಮಾವ ಕೊಡಿಸಿದ ಚಿಕಿತ್ಸೆಯಿಂದ ನನಗೆ ಸಂತಾನವಾಗಿದೆ ಎನ್ನುವುದು ಸರಿಯಲ್ಲ. ಎದುರುದಾರ ಮತ್ತು ಅವನ ತಂದೆ ತಾಯಿ ಕೊಡಿಸಿದ ಚಿಕಿತ್ಸೆಯ ಕಾರಣ ನಾನು ಗರ್ಭಿಣಿ ಎಂದು ತಿಳಿದ ತಕ್ಷಣ ಅವರು ನನಗೆ ಚುಚ್ಚು ಮಾತನ್ನು ಆಡಿದ್ದಾರೆ ಎಂದು ನನ್ನ ಅರ್ಜಿಯಲ್ಲಿ ಹೇಳಿರುವ ಮಾಹಿತಿ ಸುಳ್ಳು ಎನ್ನುವುದು ಸರಿಯಲ್ಲ.

ನಿಡಿ–9 ರ ದೂರನ್ನು ನಾನೇ ಬರೆದಿರುತ್ತೇನೆ. ನನಗೆ ಕೋರ್ಟು, ಕಚೇರಿ ಓಡಾಡಿ ಅಭ್ಯಾಸ ಇದೆ ಎಂದರೆ ಅನಿವಾರ್ಯವಾಗಿ ಬರಲೇ ಬೇಕಾಗಿದೆ ಎನ್ನುತ್ತಾರೆ. ನಿತ್ಯ ನನಗೆ ಕೋರ್ಟು–ಕಚೇರಿ ಓಡಾಡಿ ಅನುಭವ ಇರುವುದರಿಂದ ಎದುರುದಾರನ ವಿರುದ್ಧ ಪ್ರಕರಣಗಳನ್ನು ದಾಖಲಿಸುವುದು ನನ್ನ ಹವ್ಯಾಸ ಎನ್ನುವುದು ಸರಿಯಲ್ಲ. ಎದುರುದಾರನಿಂದ ಸಾಧ್ಯವಾದಷ್ಟು ಹಣ ವಸೂಲಿ ಮಾಡಬೇಕೆನ್ನುವ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎನ್ನುವುದು ಸರಿಯಲ್ಲ.

ದಿನಾಂಕ 23.11.2024 ರಂದು ಸಲ್ಲಿಸಿದ ಅರ್ಜಿಯೊಂದಿಗೆ ಸಲ್ಲಿಸಿದ ಪ್ರಮಾಣ ಪತ್ರದಂತೆ 18 ಲಕ್ಷ ರೂ.ಗಳ ಹೊಸ ಕಾರನ್ನು ಎದುರುದಾರನು ಇತ್ತೀಚೆಗೆ ಖರೀದಿಸಿದ್ದಾನೆ ಎಂದು ನಾನು ನನ್ನ ಪ್ರಮಾಣ ಪತ್ರದಲ್ಲಿ ಹೇಳಿಲ್ಲ. ಸದರಿ ಪ್ರಮಾಣ ಪತ್ರದಲ್ಲಿ ಹೇಳಿರುವ 1 ಕೋಟಿ ರೂ. ಖರ್ಚು ಮಾಡಿ ಮನೆ ಕಟ್ಟಿಸಿದ್ದಾರೆ ಎಂದು ನಾನು ಎದುರುದಾರನ ಮನೆಯಲ್ಲಿದ್ದಾಗ ನನ್ನ ಮಾವ ಹೇಳುತ್ತಿದ್ದರು. ಸದರಿ ಮನೆಯನ್ನು ಕಟ್ಟಿರುವ ಬಗ್ಗೆ ನನ್ನ ಬಳಿ ಫೋಟೋ ಇದೆ. ನನಗದೊಂದೆ ಗೊತ್ತು, ಬೇರೆ ದಾಖಲೆಗಳು ಇಲ್ಲ.

ಎದುರುದಾರನ ಹೆಸರಿನಲ್ಲಿ ಯಾವುದೇ ಜಮೀನು ಇಲ್ಲ ಎಂದರೆ ಸರಿಯಲ್ಲ. ನನ್ನ ಅರ್ಜಿಯಲ್ಲಿ ಹೇಳಿದಂತೆ ಎದುರುದಾರನಿಗೆ ವಾರ್ಷಿಕ 25 ಲಕ್ಷ ರೂ. ವರಮಾನ ಇಲ್ಲ ಎನ್ನುವುದು ಸರಿಯಲ್ಲ. ನನ್ನ ಗಂಡನ ಹೆಸರಿನಲ್ಲಿ ಯಾವುದೇ ಮನೆ ಇಲ್ಲ ಎಂದರೆ, ಸಾಕ್ಷಿಯು ಯಾವುದೇ ಉತ್ತರವನ್ನು ನೀಡಿಲ್ಲ. ನಂತರ ಸಾಕ್ಷಿಯು ಆ ಮನೆಯನ್ನು ಅತ್ತೆಯ ಹೆಸರಿನಲ್ಲಿ ಕಟ್ಟಿಸಿರುವುದಾಗಿ ನನ್ನ ಮಾವ ಹೇಳುತ್ತಿದ್ದರು. ಎದುರುದಾರನ ಆದಾಯದ ಬಗ್ಗೆ ಆದಾಯ ತೆರಿಗೆ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ಬಗ್ಗೆ ನನಗೆ ತಿಳಿದಿರುವುದಿಲ್ಲ. ಹೆಚ್ಚಿನ ಜೀವನಾಂಶ ಪಡೆಯು ದುರುದ್ದೇಶದಿಂದ ಎದುರುದಾರನಿಗೆ ಹೆಚ್ಚು ಆದಾಯ ಇದೆ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಎದುರುದಾರ, ಅವನ ತಂದೆ ತಾಯಿ, ಸಹೋದರಿ ಮತ್ತು ಅವಳ ಗಂಡ ನನಗೆ ಯಾವುದೇ ಕಿರುಕುಳ ನೀಡಿಲ್ಲ ಎಂದರೆ ಸರಿಯಲ್ಲ. ಅವರೆಲ್ಲಾ ನನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ.

ನಾನೇ ಸ್ವ ಇಚ್ಛೆಯಿಂದ ನನ್ನ ತವರು ಮನೆಯಲ್ಲಿ ವಾಸಿಸಬೇಕು ಎಂದು ಇಚ್ಛೆ ಪಟ್ಟು ನನ್ನ ಗಂಡನನ್ನು ಒತ್ತಾಯ ಪಡಿಸಿದ ಮೇರೆಗೆ ಅವನು ನನ್ನನ್ನು ಕರೆದುಕೊಂಡು ಬಂದು ನನ್ನ ತವರು ಮನೆಗೆ ಬಿಟ್ಟಿದ್ದಾನೆ ಎನ್ನುವುದು ಸರಿಯಲ್ಲ. ನನ್ನ ಸೀಮಂತ ಕಾರ್ಯಕ್ರಮ, ಮಗು ಹುಟ್ಟಿದ ನಂತರ 11 ದಿನದ ಪುಣ್ಯ ಕಾರ್ಯಕ್ರಮ ಮತ್ತು ನಾಮಕರಣವನ್ನು ನನ್ನ ಗಂಡನೇ ತನ್ನ ಸ್ವಂತ ಖರ್ಚಿನಿಂದ ಮಾಡಿದ್ದಾನೆ

ಎಂದರೆ ಸರಿ. ನನ್ನ ಮಗುವಿನ ಹೆಸರಿನಲ್ಲಿನ ನನ್ನ ಮಾವ ಪುತ್ತೂರಿನ ಪ್ರಧಾನ ಅಂಚೆ ಕಚೇರಿಯಲ್ಲಿ 25 ಸಾವಿರ ರೂ.ಗಳ ಠೇವಣಿಯನ್ನು ಇಟ್ಟಿದ್ದಾರೆ ಎಂದರೆ, ಸಾಕ್ಷಿಯು ಅವಳ ಜನ್ಮ ದಿನದ ಪ್ರಯುಕ್ತ 12 ಸಾವಿರ ರೂ. ಗಳನ್ನು ಕೊಡುಗೆಯಾಗಿ ನೀಡಿದ್ದಾರೆ ಎಂದು ನುಡಿಯುತ್ತಾರೆ. 2 ನೇ ಅರ್ಜಿದಾರಳ ಮೇಲಿನ ಪ್ರೀತಿಯಿಂದ ನನ್ನ ಮಾವ ಸದರಿ ಹಣವನ್ನು ಠೇವಣಿಯಾಗಿಟ್ಟಿದ್ದಾರೆ ಎಂದರೆ ಸರಿಯಲ್ಲ. ಸದರಿ ಹಣವನ್ನು ಪಡೆದುಕೊಳ್ಳಲು ಪುತ್ತೂರಿನ ಅಂಚೆ ಕಚೇರಿಗೆ ಹೋಗಿಲ್ಲ. ಪುತ್ತೂರಿನ ಅಂಚೆ ಕಚೇರಿಗೆ ನಾನು ಯಾಕೆ ಹೋಗಿದ್ದೆ ಎಂದರೆ ನನ್ನ ಮದುವೆಯಲ್ಲಿ ಕೊಡುಗೆಯಾಗಿ 5 ಸಾವಿರ ರೂ.ಗಳು ಬಂದಿದ್ದು, ಆ ಬಗ್ಗೆ ವಿಚಾರಿಸಲು ಅಂಚೆ ಕಚೇರಿಗೆ ಹೋಗಿದ್ದೆ. ಆ ಹಣವನ್ನು ನನ್ನ ಮಾವನೇ ನನ್ನ ಖಾತೆಗೆ ಹಾಕಿದ್ದ.

ಪುತ್ತೂರಿನ ಆಶಾ ಸ್ಟುಡಿಯೋಗೆ ನಾನು ಸದರಿ ಹಣವನ್ನು ಪಡೆದುಕೊಳ್ಳಲು ಹೋಗಿದ್ದಾಗ ಭೇಟಿ ನೀಡಿರುತ್ತೇನೆ. ಸದರಿ ಸ್ಟುಡಿಯೋಗೆ ನಾನು ಪಾಸ್ ಪೋರ್ಟ್ ಸೈಜ್ ಫೋಟೋ ಮಾಡಿಸಲು ಹೋಗಿದ್ದೆ. ನಾನು ಬಿ.ಕಾಂ ಪದವಿಧರಳು. ಶಿವಮೊಗ್ಗದ ಎಟಿಎನ್‌ಸಿಸಿ ಕಾಲೇಜಿನಲ್ಲಿ ಬಿ.ಕಾಂ ಪಡೆದಿದ್ದೇನೆ. ನಾನು ಶಿವಮೊಗ್ಗದಲ್ಲಿ ಓದುವಾಗ ನರ್ಸಿಂಗ್ ಕಾಲೇಜಿನಲ್ಲಿ ಉದ್ಯೋಗ ಸಹ ಮಾಡುತ್ತಿದ್ದೆ. ಆಗ ನನಗೆ 7 ರಿಂದ 8 ಸಾವಿರ ಮಾಸಿಕ ವೇತನ ಇತ್ತು. ಸದರಿ ವೇತನ ನನಗೆ 2014–15 ನೇ ಸಾಲಿನಲ್ಲಿ ಬರುತ್ತಿತ್ತು. ಈಗ ನಾನು ಕೆಲಸಕ್ಕೆ ಹೋದರೆ 2014–15 ನೇ ಸಾಲಿನಲ್ಲಿ ಪಡೆಯುತ್ತಿದ್ದಕ್ಕಿಂತ ಹೆಚ್ಚು ವೇತನ ಸಿಗಬಹುದು.

ಎದುರುದಾರನು ಪಿಯುಸಿ ನಂತರ ಹಾರ್ಡ್ ವೇರ್ ಕೋರ್ಸ್ ಮುಗಿಸಿರುವುದಾಗಿ ನನಗೆ ಹೇಳಿದ್ದಾರೆ. ಎದುರುದಾರನು ನನಗಿಂತ ಕಡಿಮೆ ವಿದ್ಯಾಭ್ಯಾಸ ಮಾಡಿದ್ದಾನೆ ಎಂದರೆ ಸರಿ. ಎದುರುದಾರನು ನನಗಿಂತ ಬುದ್ಧಿವಂತನಲ್ಲ ಎನ್ನುವುದು ಸರಿಯಲ್ಲ. ಎದುರುದಾರನಿಗೆ ಸ್ಥಿರವಾದ ಸಂಪಾದನೆ ಮತ್ತು ಉದ್ಯೋಗ ಇಲ್ಲ ಎನ್ನುವುದು ಸರಿಯಲ್ಲ.

ಎದುರುದಾರನನ್ನು ವಿವಾಹವಾಗುವ ಮೊದಲು ಮತ್ತೊಬ್ಬ ಹುಡುಗನೊಂದಿಗೆ ವಿವಾಹದ ಮಾತುಕತೆಯಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಆ ಹುಡುಗ ಶಿರಸಿಯವನು. ಅವನ ಹೆಸರು ವಿವೇಕ್ ಹೆಗಡೆ ಎಂದರೆ ಸರಿ. ಸದರಿ ವಿವಾಹದ ಸಂಬಂಧ ಸಾಗರ ಗ್ರಾಮಾಂತರ ಪೋಲಿಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು ಎಂದರೆ ಸರಿ. ಅಂದಿನಿಂದ ನಾನುದೂರನ್ನು ದಾಖಲಿಸುವಲ್ಲಿ ಪರಿಣಿತಳು ಎಂದರೆ ಸರಿಯಲ್ಲ. ಸದರಿ ವಿವೇಕ್ ಹೆಗಡೆಯವರ ವಿರುದ್ಧ ಸಲ್ಲಿಸಿದ ದೂರಿನಲ್ಲಿ ಮುಚ್ಚಳಿಕೆ ಬರೆಯಿಸಿಕೊಂಡಿರಬಹುದು, ಆದರೆ ನನಗೆ ನೆನಪಿಲ್ಲ.

ಈ ಜೀವನಾಂಶ ಅರ್ಜಿಯನ್ನು ಸಲ್ಲಿಸುವ ಸಂದರ್ಭದಲ್ಲಿ ನಾನು ನನ್ನ ವಕೀಲರಿಗೆ ಮದುವೆಯ ಸಂದರ್ಭದಲ್ಲಿ ನಾನು ಉದ್ಯೋಗ ಮಾಡುತ್ತಿದ್ದೆ ಎಂದು ಹೇಳಿದ್ದೇನೆ. ನನಗಿದ್ದ ಮಾನಸಿಕ ಕಾಯಿಲೆಯನ್ನು ಮುಚ್ಚಿಟ್ಟು ನನ್ನ ತಂದೆ ತಾಯಿ ಹಾಗೂ ನಾನು ಎದುರುದಾರನಿಗೆ ಮೋಸ ಮಾಡಿ ಮದುವೆ ಮಾಡಿದ್ದಾರೆ ಎನ್ನುವುದು ಸರಿಯಲ್ಲ. ನನಗೆ ಇರುವ ಮಾನಸಿಕ ಕಾಯಿಲೆಯಿಂದ ಎದುರುದಾರನು ನನ್ನೊಂದಿಗೆ ವೈವಾಹಿಕ ಜೀವನವನ್ನು ನಡೆಸಲು ಅಸಾಧ್ಯವಾಗಿದೆ ಎಂದರೆ ಸಾಕ್ಷಿಯು ಸಹಜವಾಗಿ ಸಿಟ್ಟು, ಆವೇಶ, ಕೋಪ ಪ್ರೀತಿ ಇರುತ್ತದೆ ಎಂದು ನುಡಿಯುತ್ತಾರೆ. ನನಗೆ ಕೆಲವೊಮ್ಮೆ ಯಾವುದೇ ಕಾರಣಗಳಿಂದ ಅಳು ಮತ್ತು ಕೋಪ ಬರುತ್ತದೆ ಎಂದರೆ ಸಾಕ್ಷಿಯು ಸಹಜವಾಗಿದ್ದಾಗ ಒಮ್ಮೊಮ್ಮೆ ಬರುತ್ತದೆ. ನಾನು ಎದುರುದಾರನ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.